**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ</u>**

**<u>ಸಿಸಿ ಸಂಖ್ಯೆ:</u>** 594/2020

**ಚಾಸಾಃ 1 ಫ್ರಾಸಾಃ 1**

**<u>ಸಾಕ್ಷಿಯನ್ನು ದಿನಾಂಕಃ 04-06-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಹೆಸರುಃ | ಸರೋಜಮ್ಮ |
| ಗಂಡನ ಹೆಸರುಃ | ಲೇಟ್ ಕೃಷ್ಣಪ್ಪ |
| ವಯಸ್ಸುಃ | 64 |
| ವೃತ್ತಿಃ | ಮನೆ ಕೆಲಸ |
| ವಾಸ ಸ್ಥಳಃ | ಎ ಗೊಲ್ಲಹಳ್ಳಿ |

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಆರೋಪಿ  ರವರ ಪರಿಚಯ ನನಗೆ ಇದೆ. ಆರೋಪಿ ಹಾಗೂ ನಮ್ಮ ಮಧ್ಯೆ ಕೇವಲ ಬಾಯಿ ಮಾತಿನ ಜಗಳವಾಗಿದೆ. ಸದರಿ ಆರೋಪಿ ನನಗೆ ಯಾವುದೇ ರೀತಿ ಹೊಡೆ ಬಡೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಜೀವ ಬೆದರಿಕೆಯನ್ನು ಹಾಕಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಸದರಿ ದಾಖಲಾತಿಯು ದೂರು ಆಗಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುವ ಕಾರಣದಿಂದಾಗಿ ಸದರಿ ದಾಖಲಾತಿಯನ್ನು ನಿ ಪಿ 1 ಎಂದು, ಸಾಕ್ಷಿಯ ಸಹಿ ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ ನನ್ನ ಸಹಿಯನ್ನು ಸುಮಾರು 6 ವರ್ಷದ ಹಿಂದೆ ಪೋಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ. ಸದರಿ ದಾಖಲಾತಿಗೆ ನನ್ನ ಸಹಿಯನ್ನು ಯಾವ ಕಾರಣಕ್ಕಾಗಿ ಹಾಕಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಿದ್ದು, ಅದು ಸ್ಥಳ ಮಹಜರು ಆಗಿದ್ದು, ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ದಾಖಲೆಯನ್ನು ನಿಪಿ-2  ಎಂದು, ಸಾಕ್ಷಿಯ ಸಹಿ ನಿಪಿ-2 (ಎ) ಎಂದು

ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಯಾವ ಕಾರಣಕ್ಕೆ ಹಾಕಿದ್ದೇನೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ, ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಎ.ಪಿ.ಪಿ.ರವರು ಕೋರಿರುತ್ತಾರೆ. ಅದರಂತೆ ಅನುಮತಿ ನೀಡಿದೆ.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ - 23.08.2020 ರಂದು ರಾತ್ರಿ ಸುಮಾರು 11.30 ಗಂಟೆಯಲ್ಲಿ ನಾನು, ಚಾಸಾ-2 ಪ್ರಸಾದ್ ಕೆ., ಚಾಸಾ-3 ಅಶ್ವಥಮ್ಮ ಮತ್ತು ಚಾಸಾ-4 ಮಾದೇವಿರವರುಗಳು ಎ. ಗೊಲ್ಲಹಳ್ಳಿ ಗ್ರಾಮದಲ್ಲಿರುವ ಮನೆಯಲ್ಲಿ ಮಲಗಿರುವಾಗ, ಆರೋಪಿ ಸ್ವಿಫ್ಟ್ ಕಾರು ಸಂಖ್ಯೆಕೆಎ-53-ಎಂಎಫ್-9593 ರಲ್ಲಿ ಬಂದು ನನ್ನ ಮನೆಯ ಮುಂದೆ ನಿಲ್ಲಿಸಿ, ಮನೆಯ ಬಾಗಿಲಿನ ಬಳಿ ಬಂದು ಬಾಗಿಲನ್ನು ತೆಗೆಯುವಂತೆ ಕೂಗಿಕೊಂಡಾಗ, ನಾನು ಬಾಗಿಲನ್ನು ತೆಗೆದಾಗ ಆರೋಪಿ ನನ್ನನ್ನು ಕುರಿತು 'ಬೋಳಿ ನನ್ನ ಮಗ ವೇಣುಗೋಪಾಲ ಮತ್ತು ನಿನ್ನ ಸೊಸೆ ಲೋಫರ್ ಮುಂಡೆ ಧನಲಕ್ಷ್ಮಿ ರವರು ಕೈ ಸಾಲವಾಗಿ ತೆಗೆದುಕೊಂಡಿದ್ದ ರೂ.5,000/- ಗಳನ್ನು ಕೊಡಬೇಕು, ಅವರಿಬ್ಬರೂ ಎಲ್ಲಿದ್ದಾರೆ ತೋರಿಸು ಬಾ' ಎಂದು ಕೆಟ್ಟ ಮಾತುಗಳಿಂದ ಬೈದು, ನನ್ನ ಬಲಗೈಯನ್ನು ಹಿಡಿದು ಎಳೆದಾಡಿ ನನ್ನ ಮಾನಕ್ಕೆ ಕುಂದು ಉಂಟಾಗುವಂತೆ ವರ್ತಿಸಿ, ಹಣವನ್ನು ಕೊಡದಿದ್ದರೆ ಪ್ರಾಣ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದಾನೆ ಎಂದರೆ ಸರಿಯಲ್ಲ. ಆರೋಪಿಯು ಜಗಳವನ್ನು ಬಿಡಿಸಲು ಬಂದ ಚಾಸಾ-2 ರವರಿಗೆ ಕೈಗಳಿಂದ ಮೈಮೇಲೆ ಹೊಡೆದಿದ್ದು, ಚಾಸಾ-3 ರವರಿಗೆ ಕೈಗಳಿಂದ ಮುಖಕ್ಕೆ ಹೊಡೆದು ನೋವುಂಟು ಮಾಡಿದ್ದಾನೆ ಎಂದರೆ ಸರಿಯಲ್ಲ.

ಈ ಮೇಲೆ ಹೇಳಿರುವ ಘಟನೆಗೆ ಸಂಬಂಧಿಸಿದಂತೆ ನಾನು ನಿಪಿ-1ರಂತೆ ಪೊಲೀಸರಿಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಘಟನೆಗೆ ಸಂಬಂಧಿಸಿದಂತೆ ಬಂಗಾರಪೇಟೆ ಪೊಲೀಸ್ ಠಾಣೆಯವರು ಈಗ ಓದಿ ಹೇಳಿದಂತೆ ನಿಪಿ-2ರ ಪ್ರಕಾರ ಪಂಚನಾಮೆಯನ್ನು ಬೆಳಗ್ಗೆ 11-30 ರಿಂದ 15-00 ವರಿಗೂ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಘಟನೆಗೆ ಸಂಬಂಧಿಸಿದಂತೆ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಈಗ ಓದಿ ಹೇಳಿದಂತೆ ದಿನಾಂಕ 01-09-2020 ರಂದು ನಾನು ಪೋಲೀಸರಿಗೆ ಮುಂದುವರೆದ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿ ಪಿ 3 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜೀ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೀತಾ ಎಸ್ ಹದ್ಲಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ